ಆ) ಈ ಯೋಜನೆಯ ಕಾಮಗಾರಿಗಳನ್ನು ಮಾರ್ಚ್ 2004 ರಲ್ಲಿ ಪ್ರಾರಂಭಿಸಿ 2005ರ ಮಾರ್ಚ್ ತಿಂಗಳಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ರೂ. 220.00 ಲಕ್ಷಗಳು
(ರೂ. 150.00 ಲಕ್ಷ ನೀರು ಸರಬರಾಜಿಗೆ)
(ರೂ. 70.00 ಲಕ್ಷ ರಸ್ತೆ ಮತ್ತು ಚರಂಡಿಗೆ)

ರಾಜ್ಯದಲ್ಲಿರುವ ಪುಸ್ತಕ ಪ್ರಕಾಶಕರ ಬೇಡಿಕೆಗಳು

17 (76) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪುಸ್ತಕ ಪ್ರಕಾಶಕರು ಸರ್ಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ಆ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಬು ರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :

ಅ) ನಿಜ

ಆ) ಸರ್ಕಾರದ ಮಟ್ಟದಲ್ಲಿ ಈಗಾಗಲೇ ಪುಸ್ತಕ ಪ್ರಕಾಶಕರು, ಲೇಖಕರು, ಲೇಖನ ಪ್ರಕಾಶಕರು ಇವರೊಂದಿಗೆ ಚರ್ಚಿಸಲಾಗಿದೆ. ಇವರುಗಳ ಬೇಡಿಕೆಗಳ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು, ಪುಸ್ತಕ ಆಯ್ಕೆ ಮತ್ತು ಖರೀದಿ ನಿಯಮಗಳಲ್ಲಿ ಅಗತ್ಯವಿದ್ದಲ್ಲಿ ಸೂಕ್ತ ತಿದ್ದುಪಡಿ ತಂದು ಕ್ರಮ ವಹಿಸಲಾಗುವುದು.

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಗೈರು ಹಾಜರಿ

18 (513) : ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಹಲವಾರು ದಿನಗಳಿಂದ ಗೈರುಹಾಜರಾದ ಸರ್ಕಾರಿ ವೈದ್ಯರುಗಳ ಸಂಖ್ಯೆ ಎಷ್ಟು;

ಆ) ಈ ವೈದ್ಯರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 146

ಆ) ವೈದ್ಯರುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ:

1.	ದೋಷಾರೋಪಣಾ ಪಟ್ಟಿ ಜಾರಿಯಾದ / ಜಾರಿಯಾಗಬೇಕಾದ ವಿಚಾರಣಾ ಪೂರ್ವ ಹಂತದ ಪ್ರಕರಣಗಳು.	:	90
2.	ವಿಚಾರಣಾ ವರದಿ ಸ್ವೀಕರಿಸಿದ್ದು ವರದಿಯ ಮೇಲೆ ಕ್ರಮ ಕೈಕೊಳ್ಳಲಾಗುತ್ತಿರುವ ಪ್ರಕರಣಗಳು	:	03
3.	ವಾರ್ಷಿಕ ವೇತನ ಬಡ್ತಿ ತಡೆ ಹಿಡಿಯುವ ಇನ್ನಿತರೆ ಲಘು ದಂಡನೆ ವಿಧಿಸಿದ ಪ್ರಕರಣಗಳು	:	10
4.	ಕಡ್ಡಾಯ ನಿವೃತ್ತಿ ಆದೇಶವಾದ ಪ್ರಕರಣಗಳು	:	01

5.	ಸೇವೆಯಿಂದ ವಿಮೋಚನೆ / ವಜಾ ಆದ ವೈದ್ಯರುಗಳು	:	36
6.	ಕೆ.ಸಿ.ಎಸ್.ಆರ್. ನಿಯಮ – 106ಎ ರಂತೆ ಸಕ್ರಮಗೊಳಿಸಿದ ಪ್ರಕರಣಗಳು	:	06
	ಒಟ್ಟು	:	**146**

ನೀರಾವರಿಗೆ ಬೋರ್ ವೆಲ್ ಬಾವಿ ನೀರು ಬಳಕೆ ನಿಷೇಧ

20 (213) : ಶ್ರೀ ಚಿಕ್ಕನಗೌಡರ ಸಿದ್ದನಗೌಡರ ಈಶ್ವರಗೌಡ (ಕಲ್ಲುಟಗಿ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನೀರಾವರಿಗೆ ಬೋರ್‌ವೆಲ್ ಬಾವಿ ನೀರು ಬಳಕೆ ನಿಷೇದಿಸಿ ಸರ್ಕಾರ ಆದೇಶ ಹೊರಡಿಸಿದೆಯೇ;

ಆ) ಈ ನಿಯಮದ ಉದ್ದೇಶವೇನು ಇಂತಹ ಬೋರ್‌ವೆಲ್‌ಗಳನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದೆಯೆ;

ಇ) ಇದರಿಂದ ಉಳಿತಾಯವಾಗುವ ನೀರನ್ನು ಕುಡಿಯಲು ಬಳಸಲಾಗುವುದೇ? ಹೊಸದಾಗಿ ಬೋರ್‌ವೆಲ್ ಕೊರೆಸಲು ನಿಯಮಗಳನ್ನು ಜಾರಿಗೆ ತಂದಿದೆಯೇ ಇದರ ಮಾನದಂಡಗಳೇನು;

ಈ) ಈಗಾಗಲೇ ಅನಿರ್ಭಂಧಿತವಾಗಿ ಕೊರೆಸಿರುವ ಬೋರ್‌ವೆಲ್‌ಗಳನ್ನು ಏನು ಮಾಡಲಾಗುತ್ತದೆ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) :

ಅ) ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮಾತ್ರ ಕೃಷಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಒಂದು ನಿರ್ಣಯವನ್ನು ಜಲಸಂಪನ್ಮೂಲ ಇಲಾಖೆ ಕೈಗೊಂಡಿದೆ. ಆದರೆ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಜಲ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮದ 1999 ದಿ: 27.10.2003 ರಿಂದ ಜಾರಿಗೆ ಬಂದಿರುತ್ತದೆ ಇದರ ಪ್ರಕಾರ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳಿಗೆ ಧಕ್ಕೆಯಾಗುವ ಯಾವುದೇ ಖಾಸಗಿ ಜಲಮೂಲಗಳನ್ನು ನಿಯಂತ್ರಿಸುವ / ನಿಷೇದಿಸುವ ಮತ್ತು ಸ್ವಾಧೀನ ಪಡಿಸಿಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ.

ಆ) ಈ ನಿಯಮದ ಉದ್ದೇಶ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳ ಸಂರಕ್ಷಣೆ ಇದರ ಪ್ರಕಾರ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳಿಗೆ ಧಕ್ಕೆಯಾಗುವ ಯಾವುದೇ ಖಾಸಗೀ ಜಲಮೂಲಗಳನ್ನು ನಿಯಂತ್ರಿಸುವ / ನಿಷೇಧಿಸುವ ಮತ್ತು ಸ್ವಾಧೀನ ಪಡಿಸಿಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ.

ಇ) ಇದರಿಂದ ಕುಡಿಯುವ ನೀರನ್ನು ಬಳಸಿಕೊಳ್ಳಲು ಅನುಕೂಲವಾಗುತ್ತದೆ. ಹೊಸದಾಗಿ ಬೋರ್‌ವೆಲ್ ಕೊರೆಯಬೇಕಾದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲದಿಂದ ಕನಿಷ್ಠ 500 ಮೀ. ಅಂತರ ಇರಬೇಕೆಂದು ನಿಬಂಧನೆ ಇರುತ್ತದೆ.

ಈ) ಸಾರ್ವಜನಿಕ ಕುಡಿಯುವ ನೀರಿನ ಮೂಲಗಳಿಗೆ ಧಕ್ಕೆಯಾದಲ್ಲಿ ಅವುಗಳಿಂದ ನಿಶ್ಚಿತ ಅವಧಿಯವರೆಗೆ ನೀರು ತೆಗೆಯುವುದನ್ನು ನಿಷೇಧಿಸಲಾಗುವುದು ಇಲ್ಲವೆ, ಸದರಿ ಬಾವಿಗಳನ್ನು ಮುಚ್ಚಲಾಗುವುದು.